# ಇಸ್ಲಾಮ್: ಒಂದು ಕಿರು ಪರಿಚಯ

﴿ نبذة عن الإسلام ﴾

[Kannada – ಕನ್ನಡ – كنادي ]


ಮುಹಮ್ಮದ್ ಹಂಝಾ ಪುತ್ತೂರು

محمد حمزة بتوري



2014 - 1435

IslamHouse.com

بِسْمِ اللهِ الرَّحْمَـنِ الرَّحِيم

## ಇಸ್ಲಾಮ್:

ಇಸ್ಲಾಮ್ ಎಂಬ ಅರಬಿ ಪದದ ಅರ್ಥ ಶಾಂತಿ, ಶರಣಾಗತಿ ಎಂದಾಗಿದೆ. ಒಬ್ಬ ವ್ಯಕ್ತಿ ತನ್ನನ್ನು ತಾನೇ ಸೃಷ್ಟಿಕರ್ತನಿಗೆ ಶರಣಾಗಿಸುವ ಮೂಲಕ ಪಡೆಯುವ ಮನಃಶಾಂತಿಯಾಗಿದೆ ಇಸ್ಲಾಮ್. ಹೆಸರೇ ಹೇಳುವಂತೆ ಇಸ್ಲಾಮ್ ಶಾಂತಿಯ ಧರ್ಮವಾಗಿದೆ. ಹೆಚ್ಚಿನವರೂ ಅಪಾರ್ಥ ಮಾಡಿಕೊಂಡಿರುವಂತೆ ಇಸ್ಲಾಮ್ ಎಂದರೆ ಪ್ರವಾದಿ ಮುಹಮ್ಮದ್(ﷺ)ರವರು ಹುಟ್ಟುಹಾಕಿದ ಹೊಸ ಧರ್ಮವಲ್ಲ. ಭೂಮಿಯ ಮೇಲೆ ಮೊಟ್ಟಮೊದಲು ಕಾಲೂರಿದ ಆದಿ ಮನುಷ್ಯ ಆದಮರಿಂದ ತೊಡಗಿ ಕೊನೆಯ ಪ್ರವಾದಿ ಮುಹಮ್ಮದ್(ﷺ)ರವರ ತನಕ ಎಲ್ಲ ಪ್ರವಾದಿಗಳೂ ಬೋಧಿಸಿದ ಏಕೈಕ ದೈವಿಕ ಧರ್ಮವಾಗಿದೆ ಇಸ್ಲಾಮ್.

## ಇಸ್ಲಾಮಿನ ಮೂಲಭೂತ ಆಧಾರ ಗ್ರಂಥಗಳು:

ಕುರ್‌ಆನ್ ಇಸ್ಲಾಮ್ ಧರ್ಮದ ಮೂಲಭೂತ ಆಧಾರ ಗ್ರಂಥವಾಗಿದೆ. ಸೃಷ್ಟಿಕರ್ತನಾದ ಅಲ್ಲಾಹು ಮುಹಮ್ಮದ್(ﷺ)ರವರ ಮೇಲೆ ಜಿಬ್ರೀಲ್ ಎಂಬ ದೇವದೂತರ ಮೂಲಕ ಅವತೀರ್ಣಗೊಳಿಸಿದ ಅವನ ವಚನಗಳಾಗಿವೆ ಕುರ್‌ಆನ್. ಕುರ್‌ಆನ್ ಇಸ್ಲಾಮ್ ಧರ್ಮದ ಮೂಲಭೂತ ಪ್ರಮಾಣ ಗ್ರಂಥವಾಗಿದೆ. ಇದರ ನಂತರ ಪ್ರವಾದಿ ಮುಹಮ್ಮದ್(ﷺ)ರವರ ವಚನಗಳು, ಪ್ರವೃತ್ತಿಗಳು ಮತ್ತು ಅಂಗೀಕಾರಗಳನ್ನೊಳಗೊಂಡಿರುವ ಸುನ್ನತ್ ಇಸ್ಲಾಮಿನ ಎರಡನೇ ಪ್ರಮಾಣ ಗ್ರಂಥವಾಗಿದೆ. ಇವೆರಡರ ಹೊರತು ಇಸ್ಲಾಮ್ ಧರ್ಮದಲ್ಲಿ ಮೂಲಭೂತವಾಗಿ ಆಶ್ರಯಿಸಬಹುದಾದ ಬೇರೆ ಪ್ರಮಾಣ ಗ್ರಂಥಗಳಿಲ್ಲ. ಒಬ್ಬ ವ್ಯಕ್ತಿಗೆ ಅವನ ಜನನದಿಂದ ತೊಡಗಿ ಮರಣದ ತನಕ ಪ್ರಾಯೋಗಿಕ ತತ್ವಗಳ ಆಧಾರದ ಮೇಲೆ ದೈವಿಕ ಮಾರ್ಗದರ್ಶನ ನೀಡುವ ಗ್ರಂಥಗಳಾಗಿವೆ ಕುರ್‌ಆನ್ ಮತ್ತು ಸುನ್ನತ್.

## ಮುಹಮ್ಮದ್(ﷺ):

ಮುಹಮ್ಮದ್(ﷺ)ರವರು ಅಲ್ಲಾಹನ ದಾಸರೂ ಅವನ ಸಂದೇಶವಾಹಕರೂ ಆಗಿದ್ದಾರೆ. ಅವರು ಇಸ್ಲಾಮ್ ಧರ್ಮದ ಕಟ್ಟಕಡೆಯ ಪ್ರವಾದಿಯಾಗಿದ್ದಾರೆಯೇ ಹೊರತು ಏಕೈಕ ಪ್ರವಾದಿಯಲ್ಲ. ಮುಹಮ್ಮದ್(ﷺ)ರವರಿಗಿಂತ ಮುಂಚೆ ನಿಯೋಗಿಸಲಾದ ಅಬ್ರಹಾಮ್, ಮೋಶೆ, ಯೇಸು ಮೊದಲಾದ ಸಹಸ್ರಾರು ಸಂಖ್ಯೆಯ ಪ್ರವಾದಿಗಳ ಪೈಕಿ ಮುಹಮ್ಮದ್(ﷺ)ರವರೂ ಒಬ್ಬರಾಗಿದ್ದಾರೆ. ಮುಹಮ್ಮದ್(ﷺ)ರವರನ್ನು ಪ್ರವಾದಿಯೆಂದು ಒಪ್ಪಿಕೊಳ್ಳುವಂತೆಯೇ ಅಬ್ರಹಾಮ್, ಮೋಶೆ, ಯೇಸು ಮೊದಲಾದವರನ್ನೂ ಪ್ರವಾದಿಗಳೆಂದು ಒಪ್ಪಿಕೊಳ್ಳುವುದು ಮತ್ತು ಅವರನ್ನು ಪ್ರೀತಿಸುವುದು ಮುಸ್ಲಿಮನ ಮೇಲೆ ಕಡ್ಡಾಯವಾಗಿದೆ. ಮುಹಮ್ಮದ್ (ﷺ)ರವರನ್ನು ಪ್ರವಾದಿಯೆಂದು ಅಂಗೀಕರಿಸುವ ವ್ಯಕ್ತಿ ಮೋಶೆ ಅಥವಾ ಯೇಸುವನ್ನು ಪ್ರವಾದಿಯೆಂದು ಅಂಗೀಕರಿಸದಿದ್ದರೆ ಅವನು ಮುಸ್ಲಿಮನಾಗುವುದು ಸಾಧ್ಯವಿಲ್ಲ.

## ಇಸ್ಲಾಮ್ ಧರ್ಮದ ಆಧಾರ ಸ್ಥಂಭಗಳು:

ಇಸ್ಲಾಮ್ ಧರ್ಮಕ್ಕೆ ಐದು ಆಧಾರ ಸ್ಥಂಭಗಳಿವೆ. ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ ಮತ್ತು ಮುಹಮ್ಮದ್(ﷺ)ರವರು ಅವನ ಸಂದೇಶವಾಹಕರಾಗಿದ್ದಾರೆ ಎಂಬ ಸಾಕ್ಷ್ಯವಚನ ಇಸ್ಲಾಮ್ ಧರ್ಮದ ಮೊಟ್ಟಮೊದಲ ಮತ್ತು ಅತಿಪ್ರಮುಖ ಆಧಾರ ಸ್ಥಂಭವಾಗಿದೆ. ಈ ಆಧಾರ ಸ್ಥಂಭದ ಮೇಲೆ ಅವಲಂಬಿತವಾಗಿರುವ ಇತರ ನಾಲ್ಕು ಆಧಾರ ಸ್ಥಂಭಗಳಾಗಿವೆ ದಿನನಿತ್ಯ ನಿಗದಿತ ಐದು ವೇಳೆಗಳಲ್ಲಿ ನಮಾಝ್ ನಿರ್ವಹಿಸುವುದು, ರಮದಾನ್ ತಿಂಗಳಲ್ಲಿ ಉಪವಾಸ ಆಚರಿಸುವುದು, ಕಡ್ಡಾಯ ದಾನ (ಝಕಾತ್) ನೀಡುವ ಅರ್ಹತೆಯಿರುವವರು ಅದನ್ನು ನೀಡುವುದು ಮತ್ತು ಮಕ್ಕಕ್ಕೆ ತೆರಳಿ ಹಜ್ ಯಾತ್ರೆ ನಿರ್ವಹಿಸಲು ದೈಹಿಕ ಮತ್ತು ಆರ್ಥಿಕವಾಗಿ ಸಾಧ್ಯವಿರುವವರು ಅದನ್ನು ನಿರ್ವಹಿಸುವುದು. ಇಸ್ಲಾಮ್ ಧರ್ಮದ ಈ ಐದು ಆಧಾರ ಸ್ಥಂಭಗಳನ್ನೂ ತನ್ನ ಜೀವನದಲ್ಲಿ ಪಾಲಿಸಬೇಕಾದುದು ಮುಸ್ಲಿಮನ ಮೇಲೆ ಕಡ್ಡಾಯವಾಗಿದೆ. ಇವುಗಳ ಪೈಕಿ ಯಾವುದಾದರೂ ಒಂದು ಸ್ಥಂಭವನ್ನು ತೊರೆದರೂ ಅವನ ಇಸ್ಲಾಮ್ ಸ್ವೀಕಾರಾರ್ಹವಲ್ಲ ಮತ್ತು ಅವನು ಮುಸ್ಲಿಮನಾಗಿ ಉಳಿಯುವುದಿಲ್ಲ.

## ಇಸ್ಲಾಮೀ ವಿಶ್ವಾಸ (ಈಮಾನ್)ದ ಆಧಾರ ಸ್ಥಂಭಗಳು:

ಇಸ್ಲಾಮೀ ವಿಶ್ವಾಸಕ್ಕೆ ಆರು ಆಧಾರ ಸ್ಥಂಭಗಳಿವೆ. ಅಲ್ಲಾಹನಲ್ಲಿ ವಿಶ್ವಾಸವಿಡುವುದು, ಅವನ ಮಲಕ್ (angel)ಗಳಲ್ಲಿ ವಿಶ್ವಾಸವಿಡುವುದು, ಅವನ ಗ್ರಂಥಗಳಲ್ಲಿ ವಿಶ್ವಾಸವಿಡುವುದು, ಅವನ ಸಂದೇಶವಾಹಕರಲ್ಲಿ ವಿಶ್ವಾಸವಿಡುವುದು, ಅಂತ್ಯದಿನದಲ್ಲಿ ವಿಶ್ವಾಸವಿಡುವುದು ಮತ್ತು ವಿಧಿಯಲ್ಲಿ –ಅದರ ಒಳಿತು ಮತ್ತು ಕೆಡುಕುಗಳಲ್ಲಿ– ವಿಶ್ವಾಸವಿಡುವುದು. ಈ ಮೇಲಿನ ಆರು ಸ್ಥಂಭಗಳಲ್ಲೂ ವಿಶ್ವಾಸವಿಡುವುದು ಮುಸ್ಲಿಮನ ಮೇಲೆ ಕಡ್ಡಾಯವಾಗಿದೆ. ಇವುಗಳ ಪೈಕಿ ಕೇವಲ ಒಂದರ ಮೇಲಿನ ವಿಶ್ವಾಸವನ್ನು ತೊರೆದರೂ ಅವನು ಮುಸ್ಲಿಮನಾಗಿ ಉಳಿಯುವುದಿಲ್ಲ.

## ಇಸ್ಲಾಮ್ ಧರ್ಮದಲ್ಲಿ ಬಲಾತ್ಕಾರವಿಲ್ಲ:

ತನ್ನ ನಂಬಿಕೆಯನ್ನು ಜನರ ಮೇಲೆ ಬಲಾತ್ಕಾರವಾಗಿ ಹೇರಬೇಕೆಂದು ಇಸ್ಲಾಮ್ ಬೋಧಿಸುವುದಿಲ್ಲ. ಬದಲಾಗಿ ಪ್ರತಿಯೊಬ್ಬ ವ್ಯಕ್ತಿಗೂ ಅವನಿಗೆ ಇಷ್ಟವಾದ ಧರ್ಮವನ್ನು ಆರಿಸುವ ಸ್ವಾತಂತ್ರ್ಯವನ್ನು ಇಸ್ಲಾಮ್ ನೀಡುತ್ತದೆ. ಇಸ್ಲಾಮೀ ಚರಿತ್ರೆಯಲ್ಲಿ ನಡೆದ ಯಾವುದೇ ಯುದ್ಧವೂ ಜನರ ವಿಶ್ವಾಸ ಸ್ವಾತಂತ್ರ್ಯವನ್ನು ಹರಣ ಮಾಡುವುದಕ್ಕಾಗಿರಲಿಲ್ಲ. ಬದಲಾಗಿ ಇಸ್ಲಾಮ್ ಧರ್ಮವನ್ನು ಬಾಹ್ಯ ಆಕ್ರಮಣಗಳಿಂದ ಸಂರಕ್ಷಿಸುವ ಸಲುವಾಗಿತ್ತು. ಘಝ್ನಿ, ಘೋರಿ ಮೊದಲಾದ ದೊರೆಗಳು ನಡೆಸಿದ ಆಕ್ರಮಣಗಳು ಅವರ ಸಾಮ್ರಾಜ್ಯ ವಿಸ್ತರಣೆಯ ಸಲುವಾಗಿತ್ತೇ ಹೊರತು ಇಸ್ಲಾಮ್ ಧರ್ಮಕ್ಕಾಗಿರಲಿಲ್ಲ. ಹಾಗೆಯೇ ಇಂದು ಕೆಲವು ಜನರು ಇಸ್ಲಾಮಿನ ಹೆಸರಲ್ಲಿ ನಡೆಸುವ ಭಯೋತ್ಪಾದನಾ ಕೃತ್ಯಗಳು ಅವರ ಸ್ವಹಿತಾಸಕ್ತಿಗಳ ಸಂರಕ್ಷಣೆಗಾಗಿದೆಯೇ ಹೊರತು ಇಸ್ಲಾಮಿನ ಏಳಿಗೆಗಲ್ಲ. ಯಾಕೆಂದರೆ ಇಸ್ಲಾಮ್ ಹಿಂಸೆಯನ್ನು ಪ್ರಚೋದಿಸುವುದಿಲ್ಲ. ನಾಲ್ಕು ಕಾಲುಗಳ ಮೇಲೆ ಚಲಿಸುವ ಮೂಕ ಪ್ರಾಣಿಗಳ ಮೇಲೂ ದಯೆ ತೋರಿಸಬೇಕೆಂದು ಹೇಳಿದ ಇಸ್ಲಾಮ್ ವಿಶ್ವಾಸದ ಹೆಸರಲ್ಲಿ ಜನರ ಮಾರಣ ಹೋಮ ಮಾಡುವುದನ್ನು ಖಂಡಿತ ಸಹಿಸುವುದಿಲ್ಲ. ಆದ್ದರಿಂದ ಮುಸ್ಲಿಮರಾದ ಕೆಲವರು ತಮ್ಮ ಹಿತಕ್ಕಾಗಿ ಮಾಡುವ ಯಾವುದೇ ಕಾರ್ಯವನ್ನು ಇಸ್ಲಾಮಿನ ಮೇಲೆ ಎತ್ತಿಕಟ್ಟಿ ಶಾಂತಿಯ ಧ್ವಜವಾಹಕ ಧರ್ಮವಾದ ಇಸ್ಲಾಮನ್ನು ಅವಹೇಳನ ಮಾಡುವುದು ಖಂಡಿತ ಸಲ್ಲದು.

## ವಿಶ್ವಾಸ ಮತ್ತು ಕರ್ಮ:

ಇಸ್ಲಾಮಿನಲ್ಲಿ ವಿಶ್ವಾಸ ಮತ್ತು ಕರ್ಮವು ಅವಿನಾಭಾವ ಸಂಬಂಧವನ್ನು ಹೊಂದಿವೆ. ಒಂದು ಮತ್ತೊಂದಕ್ಕೆ ಪೂರಕವಾಗಿರಬೇಕಾಗಿದೆ. ಅಂದರೆ ವಿಶ್ವಾಸವಿಲ್ಲದ ಕರ್ಮ ಅಥವಾ ಕರ್ಮವಿಲ್ಲದ ವಿಶ್ವಾಸ ಇಸ್ಲಾಮಿನಲ್ಲಿ ಸ್ವೀಕೃತವಲ್ಲ. ಇಸ್ಲಾಮೀ ವಿಶ್ವಾಸವನ್ನು ಹೊಂದಿರುವ ವ್ಯಕ್ತಿ ಅಲ್ಲಾಹನ ಎಲ್ಲ ಆದೇಶಗಳನ್ನೂ ತನ್ನ ಸಾಮರ್ಥ್ಯಕ್ಕೆ ಅನುಸಾರವಾಗಿ ಪಾಲಿಸಬೇಕಾಗಿದೆ ಮತ್ತು ಅಲ್ಲಾಹನ ಎಲ್ಲ ನಿಷೇಧಗಳಿಂದಲೂ ತನ್ನ ಸಾಮರ್ಥ್ಯಕ್ಕೆ ಅನುಸಾರವಾಗಿ ದೂರಸರಿಯಬೇಕಾಗಿದೆ. ಅಲ್ಲಾಹು ಮನುಷ್ಯರ ವಿಚಾರಣೆ ಮಾಡುವುದು ಅವರ ವಿಶ್ವಾಸ ಮತ್ತು ಕರ್ಮಗಳ ಆಧಾರದಲ್ಲಾಗಿದೆ. ನಿಷ್ಕಳಂಕವಾದ ವಿಶ್ವಾಸವನ್ನು ಹೊಂದಿದರೆ ಮಾತ್ರ ಅವನ ಕರ್ಮಗಳು ಸ್ವೀಕೃತ ವಾಗುತ್ತವೆ. ತೋರಿಕೆಗಾಗಿ ಮಾಡುವ ಯಾವ ಕರ್ಮಗಳೂ ಇಸ್ಲಾಮಿನಲ್ಲಿ ಸ್ವೀಕೃತವಲ್ಲ.

## ವಿಶ್ವಭಾತೃತ್ವ:

ಇಸ್ಲಾಮ್ ವಿಶ್ವಭಾತೃತ್ವವನ್ನು ಪ್ರೋತ್ಸಾಹಿಸುತ್ತದೆ. ಜಗತ್ತಿನ ಒಂದು ಮೂಲೆಯಲ್ಲಿರುವ ಒಬ್ಬ ಮುಸ್ಲಿಮ್ ಜಗತ್ತಿನ ಇನ್ನೊಂದು ಮೂಲೆಯಲ್ಲಿರುವ ಇನ್ನೊಬ್ಬ ಮುಸ್ಲಿಮನ ಸಹೋದರನಾಗಿದ್ದಾನೆ. ಜಾತಿ, ಕುಲ, ವರ್ಣ, ದೇಶ, ಭಾಷೆ ಮೊದಲಾದ ಬೇಧಗಳು ಇಸ್ಲಾಮ್ ಧರ್ಮದಲ್ಲಿಲ್ಲ. ಕಷ್ಟದಲ್ಲಿರುವ ಯಾವುದೇ ವ್ಯಕ್ತಿಗೂ ಅವನ ಧರ್ಮ, ವರ್ಣ, ಭಾಷೆ, ದೇಶವನ್ನು ನೋಡದೆ ನೆರವೀಯಬೇಕೆಂದು ಇಸ್ಲಾಮ್ ಬೋಧಿಸು ತ್ತದೆ. ಮಾನವೀಯ ನೆಲೆಯಲ್ಲಿ ತನ್ನ ಶತ್ರುವಿಗೂ ಉಪಕಾರ ಮಾಡಬೇಕೆಂದು ಇಸ್ಲಾಮ್ ಹೇಳುತ್ತದೆ.

## ಸಮಾನತೆ:

ಇಸ್ಲಾಮ್ ಸಮಾನತೆಯನ್ನು ಬೋಧಿಸುವ ಧರ್ಮವಾಗಿದೆ. ಉಚ್ಚ ನೀಚವೆಂಬ ಬೇಧ ಇಸ್ಲಾಮಿನಲ್ಲಿಲ್ಲ. ಬಡವ ಬಲ್ಲಿದ, ಕರಿಯ ಬಿಳಿಯ ಎಂಬ ಬೇಧವೂ ಇಲ್ಲ. ಮನುಷ್ಯರೆಲ್ಲರೂ ಆದಮನ ಮಕ್ಕಳು ಎಂದು ಇಸ್ಲಾಮ್ ಹೇಳುತ್ತದೆ. ಆರಾಧನಾ ಕರ್ಮಗಳಲ್ಲಾಗಲಿ, ವ್ಯಾವಹಾರಿಕ ರಂಗಗಳಲ್ಲಾಗಲಿ ಅಥವಾ ಶಿಕ್ಷಾನಿಯಮಗಳಲ್ಲಾಗಲಿ

ಇಸ್ಲಾಮ್ ಯಾರ ಮಧ್ಯೆಯೂ ಬೇಧ ಕಲ್ಪಿಸುವುದಿಲ್ಲ. ಮನುಷ್ಯನಿಗಿರುವ ದೇವಭಕ್ತಿಗೆ ಅನುಗುಣವಾಗಿ ಇಸ್ಲಾಮ್ ಅವನಿಗೆ ಶ್ರೇಷ್ಠತೆಯನ್ನು ಕಲ್ಪಿಸುತ್ತದೆ. ಇಸ್ಲಾಮಿನಲ್ಲಿ ಗಂಡು ಮತ್ತು ಹೆಣ್ಣಿನ ಮಧ್ಯೆಯೂ ಸಮಾನತೆಯಿದೆ. ಆದರೆ ಹೆಣ್ಣಿನ ದೈಹಿಕ ಪ್ರಕೃತಿಗೆ ಅನುಗುಣವಾಗಿ ಇಸ್ಲಾಮ್ ಆಕೆಗೆ ಕೆಲವು ನಿರ್ಬಂಧಗಳನ್ನು ಹೇರಿದೆ. ಆದರೆ ಹೆಣ್ಣಿನ ಮೇಲೆ ಹೇರುವ ಪುರುಷ ದಬ್ಬಾಳಿಕೆಯನ್ನು ಇಸ್ಲಾಮ್ ವಿರೋಧಿಸುತ್ತದೆ.

## ಸಮಾನ ನ್ಯಾಯ:

ಇಸ್ಲಾಮ್ ಸಮಾನ ನ್ಯಾಯವನ್ನು ಎತ್ತಿಹಿಡಿಯುತ್ತದೆ. ಒಬ್ಬ ವ್ಯಕ್ತಿ ಬಡವನಾಗಿರುವ ಕಾರಣದಿಂದಲೋ ಅಥವಾ ಅವನು ಕರಿಯನಾಗಿರುವ ಕಾರಣದಿಂದಲೋ ಅವನಿಗೆ ನ್ಯಾಯ ನಿರಾಕರಿಸುವುದನ್ನು ಇಸ್ಲಾಮ್ ಬಲವಾಗಿ ವಿರೋಧಿಸುತ್ತದೆ. ನ್ಯಾಯ ಪಾಲನೆಯನ್ನು ಕಠಿಣವಾಗಿ ಬೋಧಿಸುವ ಧರ್ಮವಾಗಿದೆ ಇಸ್ಲಾಮ್. ನ್ಯಾಯ ತನ್ನ ಹೆತ್ತವರಿಗೆ, ಆಪ್ತಸಂಬಂಧಿಕರಿಗೆ ಅಥವಾ ಸ್ವತಃ ತನಗೇ ವಿರುದ್ಧವಾಗಿದ್ದರೂ ನ್ಯಾಯವನ್ನು ಎತ್ತಿ ಹಿಡಿಯಬೇಕೆಂದು ಇಸ್ಲಾಮ್ ಹೇಳುತ್ತದೆ. ಯುದ್ಧ ಮೊದಲಾದ ವಿಷಮ ಸ್ಥಿತಿಗಳಲ್ಲೂ ನ್ಯಾಯ ಪಾಲಿಸಬೇಕೆಂದು ಇಸ್ಲಾಮ್ ಬೋಧಿಸುತ್ತದೆ.

## ವಿವಾಹ ಮತ್ತು ದಾಂಪತ್ಯ:

ಇಸ್ಲಾಮಿನಲ್ಲಿ ವಿವಾಹವೆಂದರೆ ಅದೊಂದು ಬಲವಾದ ಕರಾರಾಗಿದೆ. ವಿವಾಹವಾಗುವಾಗ ವರದಕ್ಷಿಣೆ ಪಡೆಯುವುದನ್ನು ಇಸ್ಲಾಮ್ ವಿರೋಧಿಸಿದೆ. ಆದರೆ ವಧುದಕ್ಷಿಣೆ (ಮಹ್ರ್) ನೀಡುವುದನ್ನು ಕಡ್ಡಾಯಗೊಳಿಸಿದೆ. ಕನ್ಯೆಯನ್ನು ವಿವಾಹ ಮಾಡಿಕೊಡುವಾಗ ಅದಕ್ಕೆ ಆಕೆ ಅನುಮತಿ ನೀಡುವುದು ಕಡ್ಡಾಯವಾಗಿದೆ. ವಿವಾಹದಲ್ಲಾಗಲಿ ಅಥವಾ ಇತರ ಯಾವುದೇ ವಿಷಯಗಳಲ್ಲಾಗಲಿ ದುಂದುವೆಚ್ಚ ಮಾಡುವುದನ್ನು ಇಸ್ಲಾಮ್ ವಿರೋಧಿಸಿದೆ. ದಂಪತಿಗಳು ಪರಸ್ಪರ ಕಷ್ಟಸುಖಗಳಲ್ಲಿ ಭಾಗಿಯಾಗಬೇಕೆಂದು ಮತ್ತು ಒಬ್ಬರನ್ನೊಬ್ಬರು ಅರಿತುಕೊಂಡು ಜೀವನ ನಡೆಸಬೇಕೆಂದು ಇಸ್ಲಾಮ್ ಬೋಧಿಸುತ್ತದೆ. ದಂಪತಿಗಳಲ್ಲಿ ಪರಸ್ಪರ ವಿರಸ ಮೂಡಿಸುವಂತಹ ಎಲ್ಲ ದ್ವಾರಗಳನ್ನು ಇಸ್ಲಾಮ್ ಮುಚ್ಚಿಹಾಕಿದೆ. ತನ್ನ ಪತ್ನಿಯ ಬಾಯಿಯಲ್ಲಿ ಹಾಕುವ ಒಂದು ತುತ್ತು ಅನ್ನಕ್ಕೂ ಪ್ರತಿಫಲವಿದೆಯೆಂದು ಇಸ್ಲಾಮ್ ಘೋಷಿಸುತ್ತದೆ. ಪತ್ನಿಯೊಂದಿಗೆ ಶಿಷ್ಟಾಚಾರದೊಂದಿಗೆ ವರ್ತಿಸುವವನೇ ನಿಜವಾದ

ಪುರುಷ ಮತ್ತು ಪತಿಯ ಆಜ್ಞೆಗಳಿಗೆ ಶಿರಸಾವಹಿಸುವುದು ಹೆಣ್ಣಿನ ಮೇಲೆ ಕಡ್ಡಾಯವಾಗಿದೆಯೆಂದು ಇಸ್ಲಾಮ್ ಬೋಧಿಸುತ್ತದೆ.

## ಕುಟುಂಬ:

ಇಸ್ಲಾಮೀ ಕುಟುಂಬದ ಮೇಲೆ ಇಸ್ಲಾಮೀ ಸಮಾಜ ಸ್ಥಾಪನೆಗೊಳ್ಳುವುದರಿಂದ ಕುಟುಂಬಕ್ಕೆ ಇಸ್ಲಾಮ್ ಮಹತ್ವವಾದ ಸ್ಥಾನವನ್ನು ನೀಡಿದೆ. ಕುಟುಂಬ ಸಂಬಂಧ ಕಡಿಯುವುದನ್ನು ಇಸ್ಲಾಮ್ ಘೋರ ಪಾಪವಾಗಿ ಪರಿಗಣಿಸುತ್ತದೆ. ಗಂಡು ಮತ್ತು ಹೆಣ್ಣು ಕುಟುಂಬದ ಪಾಲುದಾರರಾಗಿದ್ದರೂ ಕುಟುಂಬದ ನಾಯಕ ಸ್ಥಾನದ ಹೊಣೆಯನ್ನು ಇಸ್ಲಾಮ್ ಪುರುಷನ ಮೇಲೆ ವಹಿಸಿಕೊಟ್ಟಿದೆ. ಆದ್ದರಿಂದ ಕುಟುಂಬದ ಪಾಲನೆ ಪೋಷಣೆಯ ಹೊಣೆ ಪುರುಷನ ಮೇಲಿದೆ. ಕುಟುಂಬದ ವಿಷಯದಲ್ಲಿ ತೆಗೆಯಲಾಗುವ ಯಾವುದೇ ನಿರ್ಣಯವೂ ಗಂಡು ಮತ್ತು ಹೆಣ್ಣಿನ ಪಾಲುದಾರಿಕೆಯಲ್ಲಿರಬೇಕೇ ಹೊರತು ಗಂಡಿನ ಏಕಸ್ವಾಮ್ಯ ಮತ್ತು ದಬ್ಬಾಳಿಕೆಯನ್ನು ಇಸ್ಲಾಮ್ ಅಂಗೀಕರಿಸುವುದಿಲ್ಲ.

## ಹೆತ್ತವರು ಮತ್ತು ಮಕ್ಕಳು:

ಹೆತ್ತವರನ್ನು ಪ್ರೀತಿಸುವುದು ಮತ್ತು ಅವರ ವೃದ್ಧಾಪ್ಯದಲ್ಲಿ ಅವರಿಗೆ ಆಸರೆಯಾಗಿ ನಿಲ್ಲುವುದು ಇಸ್ಲಾಮಿನಲ್ಲಿ ಕಡ್ಡಾಯವಾಗಿದೆ. ಹೆತ್ತವರ ಮಾತಿಗೆ ಎದುರುತ್ತರ ಕೊಡುವುದು ಅಥವಾ ಕನಿಷ್ಠ ಛೇ ಎಂಬ ಮಾತನ್ನು ಬಳಸುವುದು ನಿಷಿದ್ಧವಾಗಿದೆ. ಮಾತೆಯ ಕಾಲಡಿಯಲ್ಲಿ ಸ್ವರ್ಗವಿದೆಯೆಂದು ಇಸ್ಲಾಮ್ ಬೋಧಿಸುತ್ತದೆ. ಹೆತ್ತವರ ತೃಪ್ತಿಯ ವಿನಾ ಸ್ವರ್ಗಪ್ರವೇಶ ಸಾಧ್ಯವಿಲ್ಲವೆಂದು ಇಸ್ಲಾಮ್ ಹೇಳುತ್ತದೆ. ಮಕ್ಕಳನ್ನು ಪ್ರೀತಿಸಬೇಕು ಮತ್ತು ಅವರ ಮಧ್ಯೆ ಸಮಾನ ನ್ಯಾಯ ಪಾಲಿಸಬೇಕೆಂದು ಇಸ್ಲಾಮ್ ಹೇಳುತ್ತದೆ. ಬಡತನವನ್ನು ಭಯಪಟ್ಟು ಮಕ್ಕಳನ್ನು ಹತ್ಯೆ ಮಾಡುವುದನ್ನು ಇಸ್ಲಾಮ್ ಘೋರ ಪಾಪವಾಗಿ ಪರಿಗಣಿಸುತ್ತದೆ. ಭ್ರೂಣಹತ್ಯೆಯನ್ನು ಇಸ್ಲಾಮ್ ನಿಷಿದ್ಧಗೊಳಿಸಿದೆ. ಇಬ್ಬರು ಹೆಣ್ಮಕ್ಕಳನ್ನು ಚೆನ್ನಾಗಿ ಬೆಳೆಸಿ, ಅವರಿಗೆ ಗೌರವಾರ್ಹವಾದ ವಿದ್ಯೆಯನ್ನು ನೀಡಿ, ವಿವಾಹ ಮಾಡಿಕೊಡುವಾತನಿಗೆ ಸ್ವರ್ಗವಿದೆಯೆಂದು ಇಸ್ಲಾಮ್ ಘೋಷಿಸು ತ್ತದೆ.

**ಸಮಾಜ:**

ಸಮಾಜದ ನೆಮ್ಮದಿಯನ್ನು ಕೆಡಿಸುವ ಮತ್ತು ಸಾಮಾಜಿಕ ಅಧಃಪತನಕ್ಕೆ ಕಾರಣವಾಗುವ ಎಲ್ಲ ಅನೈತಿಕ ಪ್ರವೃತ್ತಿಗಳನ್ನು ಇಸ್ಲಾಮ್ ನಿಷಿದ್ಧಗೊಳಿಸಿದೆ. ಮದ್ಯಪಾನ ಮೊದಲಾದ ಅಮಲು ಪದಾರ್ಥಗಳ ಸೇವನೆ, ವ್ಯಭಿಚಾರ, ವಿವಾಹಪೂರ್ವ ಲೈಂಗಿಕತೆ, ಸಲಿಂಗರತಿ, ಅನ್ಯರನ್ನು ದೂಷಣೆ ಮಾಡುವುದು, ಚಾಡಿ ಹೇಳುವುದು ಮುಂತಾದ ಎಲ್ಲ ದುರ್ಗುಣಗಳನ್ನೂ ಇಸ್ಲಾಮ್ ನಿಷಿದ್ಧಗೊಳಿಸಿದೆ. ಇವೆಲ್ಲವೂ ಕುಟುಂಬವನ್ನು ಛಿದ್ರಗೊಳಿಸುವ ಮೂಲಕ ಸಾಮಾಜಿಕ ಸ್ವಾಸ್ಥ್ಯವನ್ನು ಕೆಡಿಸುತ್ತದೆ. ಹಾಗೆಯೇ ಸಾಮಾಜಿಕ ಪಿಡುಗುಗಳಾದ ಕಳ್ಳತನ, ದರೋಡೆ, ದಬ್ಬಾಳಿಕೆ, ಅನ್ಯಾಯ, ಅಕ್ರಮ ಇತ್ಯಾದಿಗಳನ್ನು ನಿರ್ನಾಮಗೊಳಿಸುವ ಮಾರ್ಗಗಳನ್ನು ಕಲಿಸಿಕೊಡುತ್ತದೆ. ಸಮಾಜದ ಆರೋಗ್ಯಪೂರ್ಣ ನೆಲೆನಿಲ್ಲುವಿಕೆಗಾಗಿ ಅಗತ್ಯವಿರುವ ಎಲ್ಲ ಮಾರ್ಗನಿರ್ದೇಶನಗಳನ್ನು ಇಸ್ಲಾಮ್ ನೀಡಿದೆ. ಸಾಮಾಜಿಕ ಹಿತಕ್ಕಾಗಿ ಮಾಡುವ ಯಾವುದೇ ಕರ್ಮಗಳು ಇಸ್ಲಾಮಿನಲ್ಲಿ ಪ್ರತಿಫಲಾರ್ಹವಾಗಿವೆ.

**ನೆರೆಹೊರೆ:**

ನೆರೆಹೊರೆ ಸಂಬಂಧಕ್ಕೆ ಇಸ್ಲಾಮ್ ಬಹಳ ಮಹತ್ವ ನೀಡಿದೆ. ನೆರೆಯಲ್ಲಿರುವ ವ್ಯಕ್ತಿ ಯಾವ ಜಾತಿಗೆ ಸೇರಿದವನಾದರೂ ಅವನೊಂದಿಗೆ ಪಾಲಿಸಬೇಕಾದ ಶಿಷ್ಟಾಚಾರಗಳು, ತನ್ನಿಂದ ಅವನಿಗೆ ದೊರೆಯಬೇಕಾದ ಸುರಕ್ಷತೆಯನ್ನು ದೃಢೀಕರಿಸುವುದು, ಅವನ ಕಷ್ಟಸುಖಗಳಲ್ಲಿ ಪಾಲ್ಗೊಳ್ಳುವುದು ಮೊದಲಾದ ನಿಯಮ ನಿರ್ದೇಶನಗಳನ್ನು ಇಸ್ಲಾಮ್ ನೀಡಿದೆ. ನೆರೆಮನೆಯಾತ ಹಸಿದಿರುವಾಗ ಅವನ ಕಷ್ಟವನ್ನು ವಿಚಾರಿಸದೆ ನೆಮ್ಮದಿಯಾಗಿರುವುದನ್ನು ಇಸ್ಲಾಮ್ ವಿರೋಧಿಸುತ್ತದೆ.

**ಆರ್ಥಿಕತೆ:**

ಆರ್ಥಿಕ ಸಂಪಾದನೆಗಾಗಿ ವಕ್ರ ಮಾರ್ಗಗಳ ಮೊರೆ ಹೋಗುವುದನ್ನು ಇಸ್ಲಾಮ್ ನಿಷಿದ್ಧಗೊಳಿಸಿದೆ. ಕಳ್ಳತನ, ಬಡ್ಡಿ, ಜುಗಾರಿ, ಕಾಳಸಂತೆ, ಮೋಸ, ವಂಚನೆ ಇತ್ಯಾದಿಗಳನ್ನು ಇಸ್ಲಾಮ್ ವಿರೋಧಿಸಿದೆ. ನ್ಯಾಯಸಮ್ಮತ ಮಾರ್ಗಗಳ ಮೂಲಕ ಸಂಪಾದಿಸಿದ ಹಣದಿಂದ ಉಣ್ಣುವ ಆಹಾರವೇ ಶ್ರೇಷ್ಠ ಆಹಾರವೆಂದು ಇಸ್ಲಾಮ್

ಹೇಳುತ್ತದೆ. ಅನ್ಯರ ಮುಂದೆ ಕೈಚಾಚುವುದನ್ನು ಇಸ್ಲಾಮ್ ಪ್ರೋತ್ಸಾಹಿಸುವುದಿಲ್ಲ. ಪರಿಶ್ರಮಪಟ್ಟು ಕುಟುಂಬವನ್ನು ಪೋಷಿಸುವುದು ಅನ್ಯರ ಮುಂದೆ ಕೈಚಾಚುವುದಕ್ಕಿಂತಲೂ ಶ್ರೇಷ್ಠವೆಂದು ಇಸ್ಲಾಮ್ ಹೇಳುತ್ತದೆ.

**ಪರಧರ್ಮ ಸಹಿಷ್ಣುತೆ:**

ಪರಧರ್ಮ ದೂಷಣೆಯನ್ನು ಇಸ್ಲಾಮ್ ವಿರೋಧಿಸುತ್ತದೆ. ಮಾನವೀಯ ನೆಲೆಯಲ್ಲಿ ಅನ್ಯಧರ್ಮೀಯರ ಕಷ್ಟಸುಖಗಳಲ್ಲಿ ಭಾಗಿಯಾಗುವುದು, ಅವರ ಏಳಿಗೆಯನ್ನು ಬಯಸುವುದು, ಅವರೊಂದಿಗೆ ಆಪ್ತ ಸಂಬಂಧ ಹೊಂದುವುದು ಇತ್ಯಾದಿಗಳನ್ನು ಇಸ್ಲಾಮ್ ವಿರೋಧಿಸುವುದಿಲ್ಲ. ಆದರೆ ಧಾರ್ಮಿಕ ನೆಲೆಯಲ್ಲಿ ಅವರೊಂದಿಗೆ ಬೆರೆಯುವುದು, ಅಂದರೆ ಅವರ ಪೂಜೆ ಪುನಸ್ಕಾರಗಳಲ್ಲಿ ಪಾಲ್ಗೊಳ್ಳುವುದು, ಅವರ ಧಾರ್ಮಿಕ ಉತ್ಸವಗಳಲ್ಲಿ ಭಾಗಿಯಾಗುವುದು, ಅವರ ಸಂಪ್ರದಾಯಗಳನ್ನು ಅನುಕರಿಸುವುದು ಇತ್ಯಾದಿಗಳನ್ನು ಇಸ್ಲಾಮ್ ವಿರೋಧಿಸುತ್ತದೆ. ಧರ್ಮದ ಬಗ್ಗೆ ಪರಸ್ಪರ ಸಂವಾದ ಮಾಡುವುದನ್ನು ಇಸ್ಲಾಮ್ ಪ್ರೋತ್ಸಾಹಿಸುತ್ತದೆ. ಆದರೆ ಧರ್ಮದ ಹೆಸರಲ್ಲಿ ಜಗಳವಾಡುವುದನ್ನು ವಿರೋಧಿಸುತ್ತದೆ.

**ಕಾರ್ಮಿಕ ನೀತಿ:**

ಕಾರ್ಮಿಕರ ಹಕ್ಕುಗಳನ್ನು ಎತ್ತಿಹಿಡಿದ ಧರ್ಮವಾಗಿದೆ ಇಸ್ಲಾಮ್. ಕೂಲಿಯಾಳಿನ ಬೆವರು ಆರುವುದಕ್ಕೆ ಮೊದಲೇ ಅವನ ವೇತನ ಕೊಟ್ಟುಬಿಡಬೇಕೆಂದು ಇಸ್ಲಾಮ್ ಬೋಧಿಸುತ್ತದೆ. ವೇತನಕ್ಕೆ ಓರ್ವ ವ್ಯಕ್ತಿಯನ್ನು ನಿಶ್ಚಯಿಸಿದರೆ ಅವನಿಗೆ ಸಾಧ್ಯವಾಗದ ಕೆಲಸವನ್ನು ಅವನಿಂದ ಮಾಡಿಸಕೂಡದು, ಹಾಗೆ ಮಾಡಿಸುವುದಾದರೆ ಅವನಿಗೆ ಅದರಲ್ಲಿ ನೆರವೀಯಬೇಕೆಂದು ಇಸ್ಲಾಮ್ ಹೇಳುತ್ತದೆ.

ಹೀಗೆ ಇಸ್ಲಾಮ್ ಮನುಷ್ಯನ ಜೀವನದುದ್ದಕ್ಕೂ ಅವನಿಗೆ ದೈವಿಕ ಮಾರ್ಗದರ್ಶನ ನೀಡುತ್ತದೆ. ಇಲ್ಲಿ ಸೂಚಿಸಲಾಗಿರುವುದು ಅವುಗಳ ಪೈಕಿ ಕೆಲವನ್ನು ಮಾತ್ರ. ಮನುಷ್ಯನೆಂಬ ನೆಲೆಯಲ್ಲಿ ಎಲ್ಲರೊಂದಿಗೂ ಆತ್ಮೀಯವಾಗಿ ವರ್ತಿಸಬೇಕೆಂದು ಇಸ್ಲಾಮ್ ಹೇಳುತ್ತದೆ. ಇತರರ ಘನತೆ ಗೌರವಗಳಿಗೆ ಕುಂದುಂಟು ಮಾಡುವ ಎಲ್ಲ ಮಾತು, ಪ್ರವೃತ್ತಿಗಳನ್ನೂ ಇಸ್ಲಾಮ್ ವಿರೋಧಿಸುತ್ತದೆ. ಅಷ್ಟೇ ಅಲ್ಲ, ಮನುಷ್ಯ ಜೀವಿ

ಸೇರಿದಂತೆ ಈ ಜಗತ್ತಿನಲ್ಲಿರುವ ಎಲ್ಲ ಜೀವಿಗಳೊಂದಿಗೆ ದಯೆ, ಕರುಣೆ ಮತ್ತು ವಾತ್ಸಲ್ಯ ತೋರಿಸಬೇಕೆಂದು ಇಸ್ಲಾಮ್ ಬೋಧಿಸುತ್ತದೆ.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلى آلِهِ وَصَحْبِهِ أَجْمَعِين .

*********